




# ವಿಶ್ವದ ಅತಿ ದೊಡ್ಡ ಶಾಲೆ

ಉತ್ತರ ಪ್ರದೇಶ ಭಾರತದ ಅತಿ ಹೆಚ್ಚು ಜನಸಂಖ್ಯೆಯುಳ್ಳ ರಾಜ್ಯ. ಇಲ್ಲಿನ ರಾಜಧಾನಿ ಲಖನೌದಲ್ಲಿ ಒಂದು ಶಾಲೆ ಇದೆ. ಅದರ ಹೆಸರು ಸಿಟಿ ಮಾಂಟೆಸ್ಸರಿ ಸ್ಕೂಲ್. ಇದನ್ನು ಸಿಎಂಸಿ ಎಂದು ಕರೆಯುತ್ತಾರೆ. ಅದೀಗ ವಿಶ್ವದ ಅತಿ ದೊಡ್ಡ ಶಾಲೆ ಎಂಬ ಕಿರೀಟ ಹೊತ್ತಿದೆ. ಇಲ್ಲಿ 47 ಸಾವಿರ ವಿದ್ಯಾರ್ಥಿಗಳು ನಗರದ ವಿವಿಧ 20 ಕ್ಯಾಂಪಸ್‌ಗಳಲ್ಲಿ ಹರಡಿಕೊಂಡು, ಒಂದು ಸಾವಿರ ಕೊಠಡಿಗಳಲ್ಲಿ ಅಭ್ಯಾಸ ಮಾಡುತ್ತಾರೆ. 3,800 ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ದುಡಿಯುತ್ತಾರೆ.

ರಾಷ್ಟ್ರದ ಸಾಕ್ಷರತಾ ಸೂಚ್ಯಂಕದಲ್ಲಿ ತೀರಾ ಕೆಳಗಿರುವ ಉತ್ತರ ಪ್ರದೇಶಕ್ಕೆ ಶಾಲೆಗಳ ಅವಶ್ಯಕತೆ ತುಂಬ ಇದೆ. ಪ್ರತಿಶತ 74ರಷ್ಟು ಸಾಕ್ಷರತೆಯನ್ನು ಹೊಂದಿದ ಭಾರತದ ರಾಜ್ಯಗಳಲ್ಲಿ ಉತ್ತರ ಪ್ರದೇಶದ ಸ್ಥಾನ 29ನೆಯದು. ಸಿಎಂಸಿ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವಲ್ಲಿ ಗಮನಾರ್ಹ ಕಾರ್ಯ ಮಾಡಿದೆ.

ಅದು ತನ್ನ ಗಾತ್ರವನ್ನು ಹಿಗ್ಗಿಸಿಕೊಳ್ಳುವ ಜೊತೆಗೆ ಗುಣಮಟ್ಟದಲ್ಲೂ ಪ್ರಗತಿ ಸಾಧಿಸಿದೆ. ಸಾಂಪ್ರದಾಯಕ ಶಿಕ್ಷಣದೊಂದಿಗೆ ಬದುಕಿನ ಒಳ್ಳೆಯ ಮೌಲ್ಯಗಳನ್ನು ಹಾಗೂ ವಿಶ್ವಶಾಂತಿಯ ಸಂದೇಶವನ್ನು ತನ್ನ ವಿದ್ಯಾರ್ಥಿಗಳಿಗೆ ಅದು ಬೋಧಿಸುತ್ತದೆ. ಹೀಗಾಗಿ, ಅದು 2002ರಲ್ಲಿ ಯುನೆಸ್ಕೊ ಸಂಸ್ಥೆಯಿಂದ ಜಾಗತಿಕ ಶಾಂತಿ ಶಿಕ್ಷಣ ಪ್ರಶಸ್ತಿಯನ್ನು ಪಡೆದುಕೊಂಡಿದೆ. ವಿಶ್ವದಲ್ಲಿ ಇಂಥದೊಂದು ಪ್ರಶಸ್ತಿಯನ್ನು ಪಡೆದುಕೊಂಡ ಏಕಮೇವ ಶಾಲೆ ಎಂಬ ಹೆಗ್ಗಳಿಕೆ ಈ ಸಿಎಂಸಿಗೆ ಇದೆ. ಈ ಶಿಕ್ಷಣ ಸಂಸ್ಥೆಗೆ, ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ದಲಾಯ್ ಲಾಮಾ, 'ಹೋಪ್ ಫಾರ್ ಹ್ಯುಮಾನಿಟಿ' ಎಂಬ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

1959ರಲ್ಲಿ ಸಿಎಂಸಿಯನ್ನು ಆರಂಭಿಸಿದ್ದು ಡಾ.ಜಗದೀಶ ಗಾಂಧಿ ಹಾಗೂ ಅವರ ಪತ್ನಿ ಭಾರತಿ. ಆಗ ಲಖನೌ ಪಟ್ಟಣದ ತುಂಬೆಲ್ಲ 15 ದಿನಗಳ ಕಾಲ, ಡ್ರಮ್ ಬಾರಿಸಿ ವಿದ್ಯಾರ್ಥಿಗಳನ್ನು ಕರೆದರೂ ಯಾರೂ ಬರಲಿಲ್ಲವಂತೆ. ಮೊದಲ ವರ್ಷ 5 ಹುಡುಗರನ್ನು ಕಲೆ ಹಾಕಬೇಕಾದರೆ ಸಾಕು ಬೇಕಾಯಿತಂತೆ. ಆಗ ಸಿಎಂಸಿ ವಿಶ್ವದ ಅತಿ ದೊಡ್ಡ ಶಾಲೆಯಾಗುವುದೆಂದು ಅವರು ಕನಸು–ಮನಸಿನಲ್ಲೂ ಊಹಿಸಿರಲಿಲ್ಲ. ಶಿಕ್ಷಣ ಪ್ರತಿ ಮಗುವಿನ ಹಕ್ಕು ಎಂದು



ಶಾಲೆಯ ಸಂಸ್ಥಾಪಕ ಡಾ.ಜಗದೀಶ ಗಾಂಧಿ




ಭಾವಿಸಿದ ಜಗದೀಶ ಗಾಂಧಿ ತಮ್ಮ ಪ್ರಯತ್ನವನ್ನು ಬಿಡಲಿಲ್ಲ. ಅವರಿಗೀಗ 75 ವರ್ಷ. ಮೂರು ನೂರು ರೂಪಾಯಿ ಸಾಲದಿಂದ ಪ್ರಾರಂಭಿಸಿದ ಈ ಶಾಲೆ ಈಗ ಗಿನ್ನೆಸ್ ವಿಶ್ವದಾಖಲೆಯಲ್ಲಿ ಸೇರಿಯಾಗಿದೆ. ಈ ಹಿಂದೆ ಆ ದಾಖಲೆಯನ್ನು ಹೊಂದಿದ್ದ, ಫಿಲಿಪ್ಪೀನ್ಸ್ ದೇಶದ ಮನಿಲಾ ನಗರದ ರಿಝಲ್ ಹೈಸ್ಕೂಲು 19,738 ವಿದ್ಯಾರ್ಥಿಗಳನ್ನು ಹೊಂದಿತ್ತು.

3 ವರ್ಷದಿಂದ 17 ವರ್ಷ ವಯಸ್ಸಿನ ಮಕ್ಕಳು ಈ ಶಾಲೆಯಲ್ಲಿ ಓದುತ್ತಿದ್ದಾರೆ. ಈ ಶಾಲೆಗೆ ಸರಕಾರದ ಯಾವ ಅನುದಾನವೂ ಇಲ್ಲ. ಪ್ರತಿ ತಿಂಗಳು ವಿದ್ಯಾರ್ಥಿಗಳಿಂದ ಒಂದು ಸಾವಿರದಿಂದ ಎರಡೂವರೆ ಸಾವಿರ ರೂಪಾಯಿಗಳವರೆಗೆ ಶುಲ್ಕ ಸಂಗ್ರಹಿಸಲಾಗುತ್ತಿದೆ. ಇದರಿಂದಲೇ ಶಾಲೆಯ ಎಲ್ಲ ಖರ್ಚು–ವೆಚ್ಚಗಳನ್ನು ಭರಿಸಲಾಗುತ್ತದೆ.

■ ಸುಭಾಸ ಯಾದವಾಡ